**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/08/2024 )**
**ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ ಜೆ ಡಿ ಬಿ ವಕೀಲರಿಂದ,**

ನಾನು ಈ ಹಿಂದೆ ಹೇಳಿದಂತೆ ಜಾಲಿ ಪಟ್ಟಣ ಪಂಚಾಯತಿಯ ವಿರುದ್ಧ ದಾಖಲಿಸಿದ ದಾವೆಯ ಸಂಖ್ಯೆ 57/2022 ಎಂದರೆ ಸರಿ. ಪ್ರಸ್ತುತ ಸದ್ರಿ ದಾವೆ ಬೆಂಗಳೂರಿನ ನ್ಯಾಯಾಲಯಕ್ಕೆ ವರ್ಗಾವಣೆ ಆಗಿರುತ್ತದೆ. ಸದ್ರಿ ದಾವೆಯು ಜಾಲಿ ಪಟ್ಟಣ ಪಂಚಾಯತಿಯ ವಿರುದ್ಧ ವಜಾ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ದಾವೆ ವರ್ಗಾವಣೆ ಆಗಿರುತ್ತದೆ.

2. ನಾನು ದಾವಾ ಕಟ್ಟಡದಲ್ಲಿ ಈರುಳ್ಳಿ ಮತ್ತು ಬಟಾಟೆ ವ್ಯಾಪಾರವನ್ನು ಪ್ರಾರಂಭಿಸಲು ಪ್ರಥಮ ಬಾರಿಗೆ ಜಾಲಿ ಪಟ್ಟಣ ಪಂಚಾಯತಿಯಿಂದ 2012 ನೇ ಇಸವಿಯಲ್ಲಿ ಪರವಾನಿಗೆ ಪಡೆದಿರುತ್ತೇನೆ ಎಂದರೆ ಸರಿ. ಸದ್ರಿ ಪರವಾನಿಗೆಯನ್ನು ಪಡೆಯಲು ಪಂಚಾಯತಿಯವರಿಗೆ ಮಾಹಿತಿ ನಾನೇ ನೀಡಿರುತ್ತೇನೆ. ನಾನು ಸದ್ರಿ ಪರವಾನಿಗೆಯನ್ನು ಪಡೆಯಲು ಅರ್ಜಿ ಮತ್ತು ನನ್ನ ಫೋಟೊ



ನೀಡಿರುತ್ತೇನೆ. ಯಾವುದೇ ಒಂದು ವ್ಯಾಪಾರದ ಪರವಾನಿಗೆಯನ್ನು ಪಡೆಯಬೇಕಾದರೆ ಯಾವ ಕಟ್ಟಡದಲ್ಲಿ ಸದ್ರಿ ವ್ಯಾಪಾರ ಮಾಡುತ್ತಿದ್ದೇವೆ ಮತ್ತು ಏನು ವ್ಯಾಪಾರ ಎಂಬ ಬಗ್ಗೆ ಮಾಹಿತಿಯನ್ನು ಕೊಡಬೇಕು ಎಂದರೆ ಸರಿ. ಸಾಕ್ಷಿಗೆ ಒಂದು ದಿನಾಂಕ 04.02.2012 ರ ಪರವಾನಿಗೆಯ ಧೃಡಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ-27 ಎಂದು ಗುರುತಿಸಲಾಯಿತು. ನಿಪಿ-27 ದಾಖಲೆ 2012 ನೇ ಇಸವಿಯಲ್ಲಿ ನಾನು ಪಡೆದ ಪರವಾನಿಗೆ ಎಂದರೆ ಸರಿ. ಸಾಕ್ಷಿಗೆ ಎರಡು ದಾವಾ ಕಟ್ಟಡದ ವಿದ್ಯುತ್ತಿನ ಬಿಲ್ಲಿಗೆ ಸಂಬಂಧಿಸಿದಂತೆ ದಾಖಾತಿಗಳನ್ನು ತೋರಿಸಲಾಗಿ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿಪಿ-28 ಮತ್ತು 29 ಎಂದು ಗುರುತಿಸಲಾಯಿತು.

3. ವೆಂಕಟಾಪುರ ಗ್ರಾಮದ ಸರ್ವೇ ನಂಬರ 88 ಪ್ಲಾಟ್ ನಂಬರ 223 ವಾದಿಗೆ ಸೇರಿದ್ದು ಎಂದರೆ ಸರಿ. ದಾವಾ ಕಟ್ಟಡದ ಪಶ್ಚಿಮ ದಿಕ್ಕಿಗೆ ತಾಗಿ ರಾಷ್ಟ್ರೀಯ ಹೆದ್ದಾರಿ ಇರುತ್ತದೆ ಎಂದರೆ ಸರಿ. ದಾವಾ ಕಟ್ಟಡದ ಪಶ್ಚಿಮಕ್ಕೆ ತಾಗಿ ಇರುವ ಸ್ಥಳವು ರಾಷ್ಟ್ರೀಯ ಹೆದ್ದಾರಿಗೆ ಭೂಸ್ವಾಧೀನ ಆಗಿರುತ್ತದೆ

ಎಂದರೆ ಗೊತ್ತಿಲ್ಲ. ಈ ಮೇಲೆ ಹೇಳಿದ ವಾದಿಯ ಜಾಗದ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ಅದರಲ್ಲಿ 6 ಅಣೆ ಜಾಗವು ರಾಷ್ಟ್ರೀಯ ಹೆದ್ದಾರಿಗೆ ಭೂಸ್ವಾಧೀನಗೊಂಡಿರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಕಟ್ಟಡವನ್ನು ನಾನು ವಾದಿಯಿಂದ ಬಾಡಿಗೆಗೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಕುರಿತು ದಿನಾಂಕ 07.01.2014 ರಂದು ನನ್ನ ಮತ್ತು ವಾದಿಯ ನಡುವೆ ಬಾಡಿಗೆ ಕರಾರು ಆಗಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ಕಟ್ಟಡದ ಬಾಡಿಗೆ ಪ್ರತಿ ತಿಂಗಳಿಗೆ ರೂ.8,075/- (ರೂಪಾಯಿ ಎಂಟು ಸಾವಿರದ ಎಪ್ಪತ್ತೈದು) ಆಗಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ಬಾಡಿಗೆ ಕರಾರು ದಿನಾಂಕ 01.01.2014 ರಿಂದ 30.11.2014 ರವರೆಗೆ ಇತ್ತು ಎಂದರೆ ಸರಿಯಲ್ಲ. ಸದ್ರಿ ಬಾಡಿಗೆ ಕರಾರಿನಲ್ಲಿ ಬಾಡಿಗೆ ಪಾವತಿಸಲು ತಪ್ಪಿದ್ದಲ್ಲಿ ವಾರ್ಷಿಕ 18 ಶೇಕಡಾ ಬಡ್ಡಿ ಕೊಡುತ್ತೇನೆ ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸೆಪ್ಟೆಂಬರ್ 2015 ರಿಂದ ಜುಲೈ 2016 ರವರೆಗೆ ನಾನು ಬಾಡಿಗೆ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಹಾಗೆ ಈ ದಾವೆ ದಾಖಲಿಸುವ ಕಾಲಕ್ಕೆ ನಾನು ಒಟ್ಟು ರೂ.88,825/- (ರೂಪಾಯಿ ಎಂಬತ್ತೆಂಟು ಸಾವಿರದ ಎಂಟು ನೂರಾ ಇಪ್ಪತ್ತೈದು) ಬಾಡಿಗೆ ಪಾವತಿಸಲು ಬಾಕಿ ಇರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಬಾಡಿಗೆ ಕರಾರಿನ ಸಮಯಕ್ಕೆ ರೂ.25,000/- (ರೂಪಾಯಿ ಇಪ್ಪತ್ತೈದು ಸಾವಿರ) ಮುಂಗಡ ಹಣ ವಾದಿಗೆ



ಪಾವತಿಸಿದ್ದೆನು ಎಂದರೆ ಸರಿಯಲ್ಲ. ನಾನು ಬಾಡಿಗೆ ಪಾವತಿಸಲು ಬಾಕಿ ಇದ್ದ ಕಾರಣ ಬಾಡಿಗೆ ರದ್ದತಿಗಾಗಿ ದಿನಾಂಕ 20.08.2016 ರಂದು ವಕೀಲರ ಮೂಲಕ ವಾದಿ ನನಗೆ ನೋಟಿಸು ನೀಡಿರುತ್ತಾರೆ ಎಂದರೆ ಸಾಕ್ಷಿಯು ನೋಟಿಸು ಬಂದಿರುತ್ತದೆ ಹಾಗೆ ನಾನು ಯಾವುದೇ ಬಾಡಿಗೆಗೆ ಇಲ್ಲಾ ಎಂದು ಮರು ಉತ್ತರ ನೀಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಹಾಗಾಗಿಯೇ ವಾದಿಯವರು ನನ್ನನ್ನು ದಾವಾ ಕಟ್ಟಡದಿಂದ ಎಬ್ಬಿಸಲು ಈ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸುಳ್ಳು ದಾವೆ ದಾಖಲಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ದಾವಾ ಕಟ್ಟಡವನ್ನು ಸರಕಾರಿ ಜಮೀನನ್ನು ಅತಿಕ್ರಮಣ ಮಾಡಿ ಕಟ್ಟಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಕಟ್ಟಡವು ವೆಂಕಟಾಪುರ ಗ್ರಾಮದ ಸರ್ವೆ ನಂಬರ 88 ಪ್ಲಾಟ್ 223 ರಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರ 88/231 ರಲ್ಲಿ ಒಟ್ಟು 12 ಎಕರೆ ಜಮೀನು ಇರುತ್ತದೆ. ಅದು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರುತ್ತದೆ. ಸದ್ರಿ ಜಮೀನಿನ ಪೂರ್ವಕ್ಕೆ ಸರ್ವೇ

ನಂಬರ 88/223 ರ ಜಾಗ ಬರುತ್ತದೆ. ಪಶ್ಚಿಮಕ್ಕೆ ಸರ್ವೇ ನಂಬರ 88/231 ರ ಸ್ಥಳ ಬರುತ್ತದೆ. ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ಸರಕಾರಿ ಜಮೀನು ಇರುತ್ತದೆ. ಸದ್ರಿ ಸರಕಾರಿ ಜಮೀನು ಸರ್ವೇ ನಂಬರ 88 ಆಗಿರುತ್ತದೆ. ನಾನು ಹೇಳುವಂತ ಗಡಿಗುರುತ ಸರ್ವೇ ನಂಬರ 88/231 ಕ್ಕೆ ಇರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ ಆರ್ ಟಿ ಸಿ ಮಾತ್ರ ಇರುತ್ತದೆ. ನಾನು ಹೇಳುವಂತಹ ಜಾಗ ಇರುವುದೇ ಇಲ್ಲ ಎಂದರೆ ಸರಿಯಲ್ಲ. ಅದನ್ನು ಸೃಷ್ಠಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಕಟ್ಟಡಕ್ಕೆ ಮತ್ತು ನನ್ನ ಪತ್ನಿ ಬಾಡಿಗೆಗೆ ಇರುವ ಕಟ್ಟಡದ ಬಾಡಿಗೆಯನ್ನು ನಾನೇ ವಾದಿಯವರಿಗೆ ಪಾವತಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಲವೊಂದು ಬಾರಿ ಬಾಡಿಗೆ ಹಣವನ್ನು ಚೆಕ್ಕ ಮುಖಾಂತರ, ಇನ್ನೂ ಕೆಲವು ಬಾರಿ ನಗದು ರೂಪದಲ್ಲಿ ವಾದಿಗೆ ಪಾವತಿಸುತ್ತಿದ್ದೆನು ಎಂದರೆ ಸರಿಯಲ್ಲ. ದಾವಾ ಸಂಖ್ಯೆ 23/2017 ರಲ್ಲಿ ನನ್ನ ಪತ್ನಿಯ ಪರವಾಗಿ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಸದ್ರಿ ದಾವೆಯಲ್ಲಿ ಆತನ ಸಾಕ್ಷ್ಯ ವಿಚಾರಣೆಯ ಧೃಡಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ–30 ಎಂದು ಗುರುತಿಸಲಾಯಿತು. ದಾವಾ ಕಟ್ಟಡವನ್ನು ಬಿಟ್ಟು ಕೊಡಬೇಕಾಗುತ್ತದೆ ಎಂದು ಮತ್ತು ಬಾಕಿ ಬಾಡಿಗೆಯನ್ನು ಪಾವತಿಸಬೇಕಾಗುತ್ತದೆ ಎಂದು ಅದನ್ನು ತಪ್ಪಿಸುವುದಕ್ಕೋಸ್ಕರ ನನ್ನ ಅಂಗಡಿ



ಅತಿಕ್ರಮಿಸಿದ ಜಾಗದಲ್ಲಿ ಬರುತ್ತದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**